೮ ಬಿ. ಎಲ್. ಡಿ. ಇ. ಸಂಸ್ಥೆ ಬಿಜಾಪುರ,

೯ ಜನತಾ ವೆಲ್‌ಫೇರ್ ಎಜುಕೇಷನ್ ಸೊಸೈಟಿ, ಬೀದರ್,

೧೦ ಪಾಂಚಜನ್ಯ ವಿದ್ಯಾಪೀಠ, ಬೆಂಗಳೂರು,

೧೧ ಶಿವಾಜಿ ಶಿಕ್ಷಣ ಸಂಸ್ಥೆ, ಬಾದ್,

೧೨ ಕಿತ್ತೂರು ರಾಣಿ ಚೆನ್ನಮ್ಮ ಶಿಕ್ಷಣ ಸಂಸ್ಥೆ, ಬೈಲಹೊಂಗಲ (ಎರಡನೇ ಬಾರಿಯ ಅರ್ಜಿ)

೧೩ ಶ್ರೀ ಭಾಯಾ ಶ್ರೀ ಮಹಾತ್ಮ ವಿದ್ಯಾ ಸಂಸ್ಥೆ, ಮಳಲಿ,

೧೪ ಶ್ರೀ ಅನಾಥಸೇವಾಶ್ರಮ ಟ್ರಸ್ಟ್, ಮಲ್ಲಾಡಿಹಳ್ಳಿ,

೧೫ ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ

೧೬ ಭಾಗ್ಯಜ್ಯೋತಿ ವಿದ್ಯಾ ಸಂಸ್ಥೆ ಚಿತ್ರದುರ್ಗ.

೧೯೮೯–೯೦ನೇ ಸಾಲಿಗೆ ಹೊಸ ಬಿ. ಪಿ. ಎಡ್. ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ನೇರವಾಗಿ ಸಂಸ್ಥೆಗಳಿಂದ ಬಂದ ಅರ್ಜಿಗಳ ವಿವರ.

೧ ವೈ. ಎಂ. ಸಿ. ಎ. ಶಿಕ್ಷಣ ಸಂಸ್ಥೆ ಬೆಂಗಳೂರು

೨ ಕೆ. ಆರ್. ಸಿ. ಶಿಕ್ಷಣ ಸಂಸ್ಥೆ, ಬೈಲಹೊಂಗಲ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಸಂಗೊಳ್ಳಿ ಗ್ರಾಮದಲ್ಲಿ ಕನ್ನಡ ಶಾಲೆಯ ಕಟ್ಟಡದ ನಿರ್ಮಾಣದ ಬಗ್ಗೆ

ಳಳಟ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ೧೯೭೩ ಆಥವಾ ೧೯೭೪ನೇ ಇಸ್ವಿಯಲ್ಲಿ ಮಲಪ್ರಭಾ ಪ್ರೊಜೆಕ್ಟ್ ನೀರಾವರಿ ಇಲಾಖೆಯ ಇಂಜಿನಿಯರವರು ೮ ಶಾಲಾ ಕೋಣೆಗಳನ್ನು ಕಟ್ಟಿದ್ದು ಅವುಗಳ ಗುಣಮಟ್ಟ ಸರಿಯಾಗಿ ಇಲ್ಲದಿರುವುದರಿಂದ ಅವುಗಳನ್ನು ಉಪಯೋಗ ಮಾಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇದರ ವಿಚಾರಣೆಯನ್ನು ಲೋಕಾಯುಕ್ತರವರು ಮಾಡುತ್ತಿರುವುದು ನಿಜವೇ ? ಹಾಗಿದ್ದರೆ ಈ ವಿಚಾರಣೆ ಮುಗಿಯಲು ಇನ್ನು ಎಷ್ಟು ಕಾಲಾವಕಾಶ ಬೇಕಾಗುವುದು ?

ಇ) ಈ ೮ ಕೋಣೆಗಳನ್ನು ದುರಸ್ತಿಗೊಳಿಸಿ ಉಪಯೋಗಕ್ಕೆ ಒದಗಿಸಲು ಸರ್ಕಾರದವರು ತೆಗೆದು ಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್ ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು),–

ಅ) ಬಂದಿದೆ

ಆ) ಹೌದು.

ಲೋಕಾಯುಕ್ತದವರು ವಿಚಾರಣೆ ಮಾಡುತ್ತಿರುವುದರಿಂದ ಯಾವಾಗ ಮುಗಿಯುವುದೆಂದು ತಿಳಿಸಲು ಸಾಧ್ಯವಿಲ್ಲ.

ಇ) ೮ ಕೋಣೆಗಳು ಬಿದ್ದನಂತರ ಪುನಃ ೮ ಕೊಠಡಿಗಳನ್ನು ಮೊದಲಿದ್ದ ಸ್ಥಳದ ಪಕ್ಕದಲ್ಲಿ ನಿರ್ಮಿಸಿದ್ದು ಅದರಲ್ಲಿ ಪ್ರಾರ್ಥಮಿಕ ಶಾಲೆಯು ನಡೆಯುತ್ತಿದೆ.

ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು. ಈಗ ಅಲ್ಪಕಾಲಾವಧಿ ಪ್ರಶ್ನೆಗಳು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ವಿದ್ಯುತ್ ಅಭಾವದ ಬಗ್ಗೆ ಮತ್ತು ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಈ ಸದನದಲ್ಲಿ ಎರಡೂ